ಶ್ರೀ ಮಹಾಂತೇಶ್ ಎಸ್ ಕೌಜಲಗಿ (ಬೈಲಹೊಂಗಲ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಈ ಕೆಳಕಂಡ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

(೧) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಗೆ ಸೇರಿದ ರಾಜ್ಯ ಹೆದ್ದಾರಿಯಾದ ಬೈಲವಾಡ ಕ್ರಾಸಿನಿಂದ ವಣ್ಣೂರು ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ ಅರ್ಜಿ.

(೨) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಕ್ರಾಸಿನಿಂದ ಸಂಗೊಳ್ಳಿವರೆಗಿನ ಮಾರ್ಗ ಪಟ್ಟಿಹಾಳ ಕೆ.ಜಿ.ರಸ್ತೆಯು ಹಾಳಾಗಿದ್ದು ಅದನ್ನು ದುರಸ್ತಿ ಮಾಡುವ ಬಗ್ಗೆ ಅರ್ಜಿ.

(೩) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಉಡಕೇರಿ ರಸ್ತೆಯು ಹಾಳಾಗಿದ್ದು ಅದನ್ನು ದುರಸ್ತಿ ಮಾಡುವ ಬಗ್ಗೆ ಅರ್ಜಿ.

ಅಧ್ಯಕ್ಷರು: ಅರ್ಜಿಗಳನ್ನು ಒಪ್ಪಿಸಲಾಯಿತು. (ಗೊಂದಲ) (ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಈಗ ಸಭೆಯನ್ನು ೧೫ ನಿಮಿಷಗಳ ಕಾಲ ಮುಂದೂಡಲಾಗಿದೆ. (ಸದನವು ೧೧.೫೭ಕ್ಕೆ ಮುಕ್ತಾಯಗೊಂಡು, ಪುನ: ೧೫ ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು) (ಸಭೆಯು ಮಧ್ಯಾಹ್ನ ೧೨ ಗಂಟೆ ೩೩ ನಿಮಿಷಕ್ಕೆ ಪ್ರಾರಂಭವಾಯಿತು.) (ಸಭಾಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪನವರು ಪೀಠವನ್ನು ಅಲಂಕರಿಸಿದ್ದರು) (ಸದನವು ಪ್ರಾರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯರು ಮತ್ತು ಆಡಳಿತ ಪಕ್ಷದ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು, ಮಾತನಾಡಲು ಆರಂಭಿಸಿದರು)

ಅಧ್ಯಕ್ಷರು:- ನಾಲ್ಕೈದು ಜನ ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದಾರೆ, ಆದ್ದರಿಂದ ಡೋಂಟ್ ಟೇಕ್ ಡೌನ್. (ಗೊಂದಲ) (ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಆರ್.ನೀಲಕಂಠಪ್ಪನವರು ಸದನದ ಬಾವಿಗೆ ತೆರಳಿದರು) (ಗೊಂದಲ)

ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಆರ್.ನೀಲಕಂಠಪ್ಪನವರು ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

(ಗೊಂದಲ)

ಅಧ್ಯಕ್ಷರು:- ಈ ರೀತಿಯಾದರೆ ಸಭೆಯನ್ನು ನಡೆಸುವುದು ಹೇಗೆ?

(ಗೊಂದಲ)